I/223110/2022

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪ್ರಾದೇಶಿಕ ಸಂಪರ್ಕ ಯೋಜನೆ–ಉಡಾನ್ (RCS-UDAN) ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ಒದಗಿಸಲಾದ Airport Rescue and Fire Fighting Services & Security Equipments ಶುಲ್ಕವನ್ನು ಮರುಪಾವತಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 18/4/2017.
2. ನಾಗರೀಕ ವಿಮಾನಯಾನ ಮಂತ್ರಾಲಯ (MoCA) ಭಾರತ ಸರ್ಕಾರ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಹಾಗೂ ಕರ್ನಾಟಕ ಸರ್ಕಾರ ನಡುವೆ ಮಾಡಿಕೊಂಡಿರುವ ಒಡಂಬಡಿಕೆ (MoU) ದಿನಾಂಕ 20/04/2017.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 28/04/2017.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 28/04/2017, ಸೇರ್ಪಡೆ ಆದೇಶ ಸಂಖ್ಯೆ: ಐಡಿಡಿ 31 ಡಿಐಎ 2018, ದಿನಾಂಕ 06/7/2018 ಹಾಗೂ ಸಂಖ್ಯೆ ಐಡಿಡಿ/142/ಡಿಐಎ/2020, ದಿನಾಂಕ 14/02/2022.
5. ಸರ್ಕಾರದ ಆದೇಶ ಸಂಖ್ಯೆ: ಮೂಅಇ 22 ನಮುಯೋ 2020, ದಿನಾಂಕ 15/04/2021.
6. GM (F&A), AAI, Southern Region-Chennai ಇವರ ಪತ್ರ ಸಂಖ್ಯೆ: AAI/RAU/SR/RCS/Karnataka OS Dues, ದಿನಾಂಕ 24/11/2021.
7. ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 143 ಡಿಐಎ 2020, ದಿನಾಂಕ 15/11/2021.
8. ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2021, ದಿನಾಂಕ 31/12/2021.

****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 18/4/2017ರಲ್ಲಿ ರಾಷ್ಟ್ರೀಯ ನಾಗರೀಕ ವಿಮಾನಯಾನ ನೀತಿ 2016ರ ಅಡಿಯಲ್ಲಿನ Regional Connectivity Scheme (RCS)ರಲ್ಲಿ ಪಾಲ್ಗೊಳ್ಳುವ ಸಲುವಾಗಿ ಭಾರತ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಹಾಗೂ ಕರ್ನಾಟಕ ಸರ್ಕಾರದ ನಡುವೆ ಒಡಂಬಡಿಕೆಗೆ (Memorandum of Understating) ಅನುಮೋದನೆ ನೀಡಲಾಗಿರುತ್ತದೆ.

19/02/22

2. ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ, ನಾಗರೀಕ ವಿಮಾನಯಾನ ಮಂತ್ರಾಲಯ (MoCA) ಭಾರತ ಸರ್ಕಾರ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಹಾಗೂ ಕರ್ನಾಟಕ ಸರ್ಕಾರ ನಡುವೆ ದಿನಾಂಕ 20/04/2017 ರಂದು ಒಡಂಬಡಿಕೆಗೆ ((MoU) ಸಹಿ ಮಾಡಲಾಗಿದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ದಿನಾಂಕ 28/4/2017ರ ಸರ್ಕಾರದ ಅಧಿಸೂಚನೆಯನುಸಾರ RCS ರಡಿ ಆಯ್ಕೆಯಾಗಿರುವ ಏರ್‌ಲೈನ್ ಆಪರೇಟರ್‌ಗಳಿಗೆ ಕೇಂದ್ರ ಸರ್ಕಾರದಿಂದ ನೀಡುತ್ತಿರುವ ವಿಜಿಎಫ್ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇಕಡ 20ರಷ್ಟು ವಿಜಿಎಫ್ ಅನ್ನು ಭರಿಸಬೇಕಾಗಿರುತ್ತದೆ. ಅದರಂತೆ, RCS ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ವಿಮಾನ ನಿಲ್ದಾಣ ರಕ್ಷಣೆ, ಅಗ್ನಿಶಾಮಕ ಸೇವೆ ಮತ್ತು ಭದ್ರತಾ ಉಪಕರಣಗಳ (Airport Rescue and Fire Fighting Services & Security Equipment) ಸೇವೆಗಳು ಹಾಗೂ ಕೆಲವು ರಿಯಾಯಿತಿಗಳನ್ನು ನೀಡಲಾಗಿರುತ್ತದೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿನ ದಿನಾಂಕ 28/4/2017ರ ಸರ್ಕಾರದ ಅಧಿಸೂಚನೆ, ಸೇರ್ಪಡೆ ಆದೇಶ ಸಂಖ್ಯೆ ಐಡಿಡಿ 31 ಡಿಐಎ 2018, ದಿನಾಂಕ 6/7/2018 ಮತ್ತು ಸೇರ್ಪಡೆ ಆದೇಶ ಸಂಖ್ಯೆ: ಐಡಿಡಿ 142 ಡಿಐಎ 2020, ದಿನಾಂಕ 14/02/2022ರಲ್ಲಿ (ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 90 ಡಿಐಎ 2016, ದಿನಾಂಕ 18/4/2017ರಲ್ಲಿ ನೀಡಲಾಗಿರುವ ಅನುಮೋದನೆಯಂತೆ) ಮೈಸೂರು (ಮಂಡಕಳ್ಳಿ), ಬೀದರ್, ಬೆಂಗಳೂರು, ವಿದ್ಯಾನಗರ (ಬಳ್ಳಾರಿ), ಹುಬ್ಬಳ್ಳಿ, ಬೆಳಗಾವಿ ಮತ್ತು ಕಲಬುರಗಿ ವಿಮಾನ ನಿಲ್ದಾಣಗಳನ್ನು Regional Connectivity Scheme (RCS) ಸೇರಿಸಲಾಗಿದೆ. ಸದರಿ ಅಧಿಸೂಚನೆಯ ಕಂಡಿಕೆ 2(c)ರ ಉದ್ಧೃತ ಭಾಗ ಈ ಕೆಳಕಂಡಂತೆ ತಿಳಿಸಿದೆ:

> "State Government shall provide security and fire services free of cost at Government RCS Airports, for private RCS Airports, it will be examined on case to case basis."

5 ಮೇಲೆ ಓದಲಾದ ಕ್ರಮ ಸಂಖ್ಯೆ (5) ಆದೇಶದಲ್ಲಿ ಪ್ರಸಕ್ತ 2021-22ನೇ ಸಾಲಿನಲ್ಲಿ ರಾಜ್ಯದ ಆಯವ್ಯಯದಲ್ಲಿ, ಲೆಕ್ಕ ಶೀರ್ಷಿಕೆ "3451-00-090-1-18-059 Regional Air Conectivity other expenses (ಪ್ರಾದೇಶಿಕ ವಾಯು ಸಂಪರ್ಕ-ಇತರೆ ಖರ್ಚುಗಳು)" ಅಡಿ ಒದಗಿಸಲಾಗಿರುವ ಅನುದಾನದಲ್ಲಿ ಭಾರತ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯವು Regional Connectivity Scheme (RCS)-UDAN ಅಡಿ ರಾಜ್ಯದ ಐದು ವಿಮಾನ ನಿಲ್ದಾಣಗಳ ಮೂಲಕ ವಿಮಾನಯಾನ ನಡೆಸುತ್ತಿರುವ ವಿಮಾನಯಾನ ಸಂಸ್ಥೆಗಳಿಗೆ ನೀಡಲಾಗಿರುತ್ತಿರುವ Viability Gap Funding ಸಹಾಯಧನದ ಪೈಕಿ ಶೇಕಡ 20ರಷ್ಟು ಮೊತ್ತವನ್ನು ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆ ಮಾಡಲಾಗುತ್ತಿದೆ ಹಾಗೂ RCS ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ವಿಮಾನ ನಿಲ್ದಾಣ ರಕ್ಷಣೆ, ಅಗ್ನಿಶಾಮಕ ಸೇವೆ ಮತ್ತು ಭದ್ರತಾ ಉಪಕರಣಗಳ (Airport Rescue and Fire Fighting Services & Security Equipment) ಸೇವೆಗಳು ಮೊತ್ತವನ್ನು ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ಕ್ರಮವಾಗಿ ಭಾರತ ಸರ್ಕಾರದ ಅಧೀನದಲ್ಲಿ ಬರುವ Regional Air Connectivity Fund Trustನ ಖಾತೆಗೆ ಹಾಗೂ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ವರ್ಗಾಯಿಸಲಾಗುತ್ತಿದೆ. ಸದರಿ ಲೆಕ್ಕಶೀರ್ಷಿಕೆ ಅಡಿ ಇದುವರೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ:

| ಕ್ರ.ಸಂ | ವಿವರ | ವೆಚ್ಚ | ಶಿಲ್ಕು |
|---|---|---|---|
| | ಸರ್ಕಾರದ ಆದೇಶ ಸಂಖ್ಯೆ: IDD 22 UIP 2020, ದಿನಾಂಕ 15/4/2021ರಲ್ಲಿ ಹಂಚಿಕೆ ಮಾಡಿರುವ ಅನುದಾನ | | 470000000 |
| | ಬಿಡುಗಡೆ ಮಾಡಿರುವ ಅನುದಾನದ ವಿವರ | | |
| 1 | ಸರ್ಕಾರದ ಆದೇಶ ಸಂಖ್ಯೆ: IDD 142 DIA 2020, ದಿನಾಂಕ 22/4/2021 (33ನೇ, 43, 44 ಮತ್ತು 45ನೇ ಕ್ಲೇಮು). | 117793708 | |
| 2 | ಸರ್ಕಾರದ ಆದೇಶ ಸಂಖ್ಯೆ: IDD 142 DIA 2020, ದಿನಾಂಕ 31/8/2021 (47ನೇ ಕ್ಲೇಮು) | 39857379 | |
| 3 | ಸರ್ಕಾರದ ಆದೇಶ ಸಂಖ್ಯೆ: IDD 142 DIA 2020, ದಿನಾಂಕ 27/9/2021 (46ನೇ ಕ್ಲೇಮು) | 35578903 | |
| 4 | ಸರ್ಕಾರದ ಆದೇಶ ಸಂಖ್ಯೆ: IDD 142 DIA 2020, ದಿನಾಂಕ 29/10/2021 (48ನೇ ಕ್ಲೇಮು) | 75269445 | |
| 5 | ಸರ್ಕಾರದ ಆದೇಶ ಸಂಖ್ಯೆ: IDD 143 DIA 2020, ದಿನಾಂಕ 15/11/2021 Airport Rescue and Fire Fighting Services & Security Equipments ಶುಲ್ಕ ಮರುಪಾವತಿ. | 56820821 | |
| 6. | ಸರ್ಕಾರದ ಆದೇಶ ಸಂಖ್ಯೆ: IDD 142 DIA 2020, ದಿನಾಂಕ 14/2/2022 (50 ಮತ್ತು 51ನೇ ಕ್ಲೇಮು) | 59941125 | |
| | | 385261381 | 84738619 |

6. ಮೇಲೆ ಓದಲಾದ ಕ್ರಮ ಸಂಖ್ಯೆ(6)ರ ಪತ್ರದಲ್ಲಿ GM (F&A)-RCS, MoCA ಇವರು RCS-UDAN ಕುರಿತಂತೆ ನಾಗರಿಕ ವಿಮಾನಯಾನ ಸಚಿವಾಲಯ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಮತ್ತು ರಾಜ್ಯ ಸರ್ಕಾರದ ನಡುವೆ ಆಗಿರುವ ದಿನಾಂಕ:20.04.2017ರ ಒಡಂಬಡಿಕೆಯನ್ವಯ RCS-UDANರಡಿಯಲ್ಲಿನ ಮೈಸೂರು, ವಿದ್ಯಾನಗರ, ಹುಬ್ಬಳ್ಳಿ, ಕಲಬುರಗಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳಿಗೆ Airport Rescue and Fire Fighting Services & Security Equipment ಸೇವೆಗಳ ಬಾಬ್ತು (ದಿನಾಂಕ:01.01.2021 ರಿಂದ 30.09.2021ರವರೆಗೆ) ಒಟ್ಟು ರೂ.8,69,36,793/-ಗಳನ್ನು ರಾಜ್ಯ ಸರ್ಕಾರದಿಂದ ಮರುಪಾವತಿಸುವಂತೆ ಕೋರಿರುತ್ತಾರೆ.

7. ಮೇಲೆ ಓದಲಾದ ಕ್ರಮ ಸಂಖ್ಯೆ(7)ರ ದಿನಾಂಕ 15/11/2021ರ ಸರ್ಕಾರದ ಆದೇಶದಲ್ಲಿ RCS-UDANರಡಿಯಲ್ಲಿನ ಮೈಸೂರು, ವಿದ್ಯಾನಗರ, ಹುಬ್ಬಳ್ಳಿ, ಕಲಬುರಗಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳಿಗೆ Airport Rescue and Fire Fighting Services & Security Equipment ಸೇವೆಗಳ ಬಾಬ್ತು (ದಿನಾಂಕ:01.01.2021 ರಿಂದ 30.06.2021ರವರೆಗೆ) ಒಟ್ಟು ರೂ.5,68,20,821/-ಗಳನ್ನು ಕೆಎಸ್ಐಐಡಿಸಿ ನಿಯಮಿತದ ಮೂಲಕ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಮರುಪಾವತಿಸಲು ಮಂಜೂರಾತಿ ನೀಡಲಾಗಿರುತ್ತದೆ. ಆದ್ದರಿಂದ, RCS-UDAN ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ Airport Rescue & Fire Fighting Services and Security Equipment ಸೇವೆಗಳ ಮೊತ್ತ (ದಿನಾಂಕ 01/07/2021 ರಿಂದ 30/09/2021ರವರೆಗೆ) ರೂ.3,01,15,972/- (ರೂಪಾಯಿ ಮೂರು ಕೋಟಿ ಒಂದು ಲಕ್ಷದ ಹದಿನೈದು ಸಾವಿರದ ಒಂಬೈನೂರ ಎಪ್ಪತ್ತೆರಡು ಮಾತ್ರ)ಗಳನ್ನು ರಾಜ್ಯ ಸರ್ಕಾರದಿಂದ ಮರುಪಾವತಿಸಬೇಕಾಗಿರುತ್ತದೆ.

8. ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಸರ್ಕಾರದ ಆದೇಶ ದಿನಾಂಕ 31/12/2021ರಲ್ಲಿ 2021-22ನೇ ಸಾಲಿನಲ್ಲಿ ನಾಲ್ಕನೇ ಕಂತಿನ ಹಣ ಬಿಡುಗಡೆಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ ಹೇಳಲಾಗಿದೆ.

ಪ್ರಸ್ತಾಪಿತ ರೂ.3,01,15,972/-ಮೊತ್ತದ ವೆಚ್ಚವನ್ನು ಪ್ರಸಕ್ತ ಆರ್ಥಿಕ ವರ್ಷದ ಲೆಕ್ಕ ಶಿರ್ಷಿಕೆ "3451-00-090-1-18-059 Regional Air Conectivity other expenses (ಪ್ರಾದೇಶಿಕ ವಾಯು ಸಂಪರ್ಕ-ಇತರೆ ಖರ್ಚುಗಳು)" ಅಡಿ ಒದಗಿಸಲಾಗಿರುವ ಅನುದಾನದಲ್ಲಿ ಭರಿಸಬೇಕಾಗುತ್ತದೆ. ಈ ಲೆಕ್ಕಶೀರ್ಷಿಕೆ ಅಡಿ ಇದುವರೆಗೆ ವಿಜಿಎಫ್ ಉದ್ದೇಶಕ್ಕೆ ರೂ. 32,84,40,560/-ಮತ್ತು Airport Rescue, Fire Fighting Services & Security Equipment ಸೇವೆಗಳ ಮರುಪಾವತಿಗೆ ದಿನಾಂಕ 1/1/2021 ರಿಂದ 30/6/2021ರವರೆಗಿನ ಬಾಬ್ತು ರೂ.5,68,20,821/- ಒಟ್ಟಾರೆ ರೂ.38,52,61,381/- ಬಿಡುಗಡೆ ಮಾಡಲಾಗಿದ್ದು, ರೂ.8,47,38,619/- ಅನುದಾನ ಬಾಕಿ ಉಳಿದಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಐಡಿಡಿ/143/ಡಿಐಎ/2020,**
**ಬೆಂಗಳೂರು, ದಿನಾಂಕ 18/02/2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, RCS-UDANರಡಿಯಲ್ಲಿನ ಮೈಸೂರು, ವಿದ್ಯಾನಗರ, ಹುಬ್ಬಳ್ಳಿ, ಕಲಬುರಗಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳ Airport Rescue and Fire Fighting Services & Security Equipments ನೇಮಕಾತಿ ಶುಲ್ಕ (ದಿನಾಂಕ 01/07/2021 ರಿಂದ 30/09/2021ರವರೆಗೆ) ರೂ.3,01,15,972/- (ರೂಪಾಯಿ ಮೂರು ಕೋಟಿ ಒಂದು ಲಕ್ಷದ ಹದಿನೈದು ಸಾವಿರದ ಒಂಬೈನೂರ ಎಪ್ಪತ್ತೆರಡು ಮಾತ್ರ)ಗಳನ್ನು ಕೆ.ಎಸ್.ಐ.ಐ.ಡಿ.ಸಿ ನಿಯಮಿತದ ಮುಖಾಂತರ ನಾಗರೀಕ ವಿಮಾನಯಾನ ಮಂತ್ರಾಲಯ, ಭಾರತ ಸರ್ಕಾರ ಇವರಿಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಮರುಪಾವತಿಸಲು ಮಂಜೂರಾತಿ ನೀಡಿದೆ.

ಅ) ಸರ್ಕಾರದ ಅಧಿಸೂಚನೆ ದಿನಾಂಕ:28.04.2017ರನ್ವಯ ಹಾಗೂ ಆರ್‌ಸಿಎಸ್-ಉಡಾನ್ ಯೋಜನೆಯಡಿಯಲ್ಲಿನ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ (MoCA)ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (AAI) ಇವರು ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡಿರುವ ದಿನಾಂಕ:20.04.2017ರ ಒಡಂಬಡಿಕೆಯನುಸಾರ ಕ್ರಮವಹಿಸುವುದು ಹಾಗೂ ಬಿಡುಗಡೆಗೂ ಮುನ್ನ ಪರಿಶೀಲಿಸಿ ನಂತರ ಬಿಡುಗಡೆ ಮಾಡತಕ್ಕದ್ದು.

ಆ) ಬಿಡುಗಡೆ ಮಾಡಲಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಕೂಡಲೇ ಸಲ್ಲಿಸತಕ್ಕದ್ದು ಹಾಗೂ ದಾಖಲಾತಿಗಳನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

2. ಈ ವೆಚ್ಚವನ್ನು 2021-22ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶಿರ್ಷಿಕೆ "3451-00-090-1-18-059- ಪ್ರಾದೇಶಿಕ ವಾಯು ಸಂಪರ್ಕ –ಇತರೆ ಖರ್ಚುಗಳು" ರಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

3. ಈ ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ ನಿಯಮಿತ, ಬೆಂಗಳೂರು ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ಸೆಳೆಯಲು ಅನುಮತಿಸಿದೆ.

4. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2021, ದಿನಾಂಕ 31/12/2021ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು
ಮತ್ತು ಒಳನಾಡು ಜಲಸಾರಿಗೆ ಇಲಾಖೆ,

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಆಡಿಟ್-1,2,3A & E), ಪ್ರಧಾನ ಮಹಾಲೇಖಪಾಲರ ಕಛೇರಿ, ಎವಿಡಿ ಸೆಕ್ಷನ್, ಕೆ.ಪಿ.ಎಸ್.ಸಿ.ಕಛೇರಿ ಎದುರು, ಬೆಂಗಳೂರು,
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ಆಯುಕ್ತರು/ನಿರ್ದೇಶಕರು, ಖಜಾನೆ ಇಲಾಖೆ, ಕೆ.ಪಿ ಸಿಎಲ್ ಕಟ್ಟಡ, ಬೆಂಗಳೂರು.
4. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು
5. ಅಪರ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ ಕಾರ್ಯಕ್ರಮ, ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1,) ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯಶಿ೯ಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ, ವೆಬ್ ಸೈಟ್ ನಲ್ಲಿ ಪ್ರಕಟಿಸಲು.
12. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.